# ಕೂದಲ ಬಣ್ಣ; ನೋಟ ಚೆನ್ನ

ತಲೆಗೂದಲಿಗೆ ಬಣ್ಣ ಹಚ್ಚಿಕೊಂಡು ಫ್ಯಾಷನ್ ಮೆರೆಯುವ ಕಾಲ ಇದು. ತಮ್ಮ ಅಭಿರುಚಿಗೆ, ಟ್ರೆಂಡ್‌ಗೆ, ಉಡುಪಿಗೆ ತಕ್ಕಂತೆ ಕೂದಲಿಗೆ ಬಣ್ಣ ಹಚ್ಚಿಕೊಂಡು ಫ್ಯಾಷನಬಲ್ ಆಗಿ ಕಾಣಿಸಿಕೊಳ್ಳುವ ತವಕ ಈಗ ಯುವಜನರದ್ದಾಗಿದೆ.

■ ಆಶಾ ಕುಲಕರ್ಣಿ



ಈಗ 'ಕರಿಗೂದಲು ಬೆಳ್ಳಗಾಯಿತು, ನಿನಗೆ ವಯಸ್ಸಾಯಿತು' ಎಂದು ಛೇಡಿಸುವವರೇ ಇಲ್ಲ. ಮಕ್ಕಳಿಂದ ಹಿಡಿದು ಮುದುಕರವರೆಗೆ ತಲೆಗೂದಲು ನರೆಯಾಗುವುದು ಸಾಮಾನ್ಯ. ವಾತಾವರಣದಲ್ಲಿನ ಕಲ್ಮಷ, ದೂಳು, ನೀರಿನ ಸಮಸ್ಯೆ, ಹಾರ್ಮೋನಿನ ಏರುಪೇರು, ಅವೈಜ್ಞಾನಿಕ ಆಹಾರ ಪದ್ಧತಿ, ಒತ್ತಡ... ಮುಂತಾದ ಕಾರಣಗಳಿಂದ ಇಂದು ತಲೆಗೂದಲು ಕಪ್ಪು ಕಪ್ಪಾಗಿ ಉಳಿದಿಲ್ಲ. ಹಾಗೆಂದು ಚಿಂತೆ ಮಾಡುತ್ತಾ ಕೂರುವ ಕಾಲ ಇದಲ್ಲ.

ನಮ್ಮ ಇಷ್ಟಕ್ಕೆ ಅನುಸಾರವಾಗಿ ಯಾವ ಬಣ್ಣವನ್ನಾದರೂ ಕೂದಲಿಗೆ ಹಾಕಿಕೊಂಡು ಸಂಭ್ರಮಿಸಬಹುದು. ಇದಕ್ಕೆ ಫ್ಯಾಷನ್ ಎಂಬ ನೆಪ ತಳುಕು ಹಾಕಿಕೊಂಡ ಕಾರಣ ತಲೆಗೂದಲ ಬಣ್ಣಕ್ಕೆ ಕಪ್ಪು–ಬಿಳಿ ಎಂಬ ಭೇದವಿಲ್ಲ. ತಮ್ಮ ಉಡುಪಿಗೆ ಮ್ಯಾಚ್ ಆಗುವಂತೆ ಕೂದಲನ್ನು ಕಂದು, ಹಸುರು, ಕೆಂಪು, ಕಿತ್ತಳೆ, ನೀಲಿ ಬಣ್ಣವನ್ನಾಗಿಸಿ ಸಂಭ್ರಮಪಡುವ ಫ್ಯಾಷನ್‌ಪ್ರಿಯರು ಇದ್ದಾರೆ.

ಇಂದಿನ ಫ್ಯಾಷನ್ ಯುಗದಲ್ಲಿ ಮಹಿಳೆಯರು ಎಲ್ಲದರಲ್ಲೂ ಹೊಸತನ ಬಯಸುತ್ತಾರೆ. ತಾವು ಧರಿಸುವ ಡ್ರೆಸ್‌ದಿಂದ ಹಿಡಿದು ತಮ್ಮ ಹೇರ್‌ಸ್ಟೈಲ್ ಬಗ್ಗೆಯೂ ಅಧಿಕ ಆಸಕ್ತಿ ತೋರುತ್ತಿರುವುದರ ಪರಿಣಾಮ ಕೂದಲಿಗೆ ಹೇರ್ ಕಲರ್ ಮಾಡಿಸುತ್ತಿದ್ದಾರೆ. ಫ್ಯಾಷನ್‌ಪ್ರಿಯ ಯುವಕ, ಯುವತಿಯರು ಫ್ಯಾಷನ್‌ಗೆ ತಕ್ಕಂತೆ ಸೌಂದರ್ಯವನ್ನು ಇಮ್ಮಡಿಸುವ ಸಲುವಾಗಿ ತಮ್ಮ ಕೂದಲಿಗೆ ಹೇರ್ ಕಲರ್ ಮಾಡಿಸುತ್ತಿದ್ದಾರೆ.

ಫ್ಯಾಷನಬಲ್ ಆಗಿ ಹೇರ್‌ಸ್ಟೈಲ್ ಬದಲಿಸಿಕೊಳ್ಳುವುದರ ಜೊತೆಗೆ ಮಾರುಕಟ್ಟೆಯಲ್ಲಿ ದೊರೆಯುವ ವರ್ಣಮಯ ಹೇರ್‌ಕಲರ್‌ಗಳಿಗೆ ಮಹಿಳೆಯರು ಮನಸೋತಿದ್ದಾರೆ. ಈವರೆಗೆ ಕೇವಲ ಸಿನಿಮಾ ತಾರೆಗಳ ಮತ್ತು ಸೆಲೆಬ್ರಿಟಿಗಳ ಕೂದಲುಗಳಷ್ಟೇ, ಹೇರ್ ಕಲರ್‌ನಿಂದ ಹೊಳೆಯುತ್ತಿತ್ತು. ಆದರೆ ಈಗ ಎಲ್ಲರೂ ಕೂದಲಿಗೆ ಸಿಂಗಲ್ ಅಥವಾ ಮಲ್ಟಿ ಕಲರ್ ಮಾಡಿಸಿಕೊಂಡು ತಲೆಗೂದಲನ್ನು ಲಕಲಕ ಹೊಳೆಯುವಂತೆ ಮಾಡುತ್ತಿದ್ದಾರೆ. ತಲೆಗೂದಲ ಸೌಂದರ್ಯಕ್ಕೆ ಮೆರುಗು ನೀಡಲು ಮಾರುಕಟ್ಟೆಯಲ್ಲಿ ವಿವಿಧ ಬಣ್ಣದ ಹೇರ್ ಕಲರ್‌ಗಳು ಲಗ್ಗೆ ಇಟ್ಟಿವೆ. ಅವುಗಳಲ್ಲಿ ನೀಲಿ, ಕೆಂಪು, ಕಂದು, ಮರೂನ್ ಕಲರ್‌ಗಳು ಹೆಚ್ಚು ಟ್ರೆಂಡಿ ಆಗಿವೆ.

ಹಿಂದೆಲ್ಲಾ ಮೆಹೆಂದಿಯನ್ನು ಕೂದಲಿಗೆ ಹಚ್ಚಿಕೊಳ್ಳುತ್ತಿದ್ದರು. ಆದರೆ ಇಂದಿನ ಜಂಜಾಟದ ಬದುಕಿನಲ್ಲಿ ಯಾರಿಗೂ ಮೆಹೆಂದಿ ಹಚ್ಚಿಕೊಳ್ಳುವಷ್ಟು ಸಮಯವೂ ಇಲ್ಲ, ತಾಳ್ಮೆಯೂ ಇಲ್ಲ. ಕೂದಲಿಗೆ ಬಣ್ಣ ಹಚ್ಚಿಕೊಳ್ಳಲು ಮಾರುಕಟ್ಟೆಯಲ್ಲಿ ರೆಡಿಮೇಡ್ ಬಣ್ಣಗಳೇ ಸಿಗುತ್ತಿರುವಾಗ ಯಾಕೆ ಕಷ್ಟಪಡಬೇಕು ಎಂಬಂಥ ಮನಸ್ಥಿತಿ. ತಲೆಗೂದಲಿಗೆ ಹಾಕುವ